ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	532
ಸದಸ್ಯರ ಹೆಸರು	:	ಶ್ರೀಮತಿ ಎಸ್.ವೀಣಾ ಅಚ್ಚಯ್ಯ
ಉತ್ತರಿಸಬೇಕಾದ ಸಚಿವರು	:	ಸಾರಿಗೆ ಸಚಿವರು
ಉತ್ತರಿಸಬೇಕಾದ ದಿನಾಂಕ	:	18-07-2019

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೆಂಗಳೂರಿನಿಂದ ಮಡಿಕೇರಿಗೆ ಹಾಗೂ ಮಡಿಕೇರಿಯಿಂದ ಬೆಂಗಳೂರಿಗೆ ಪ್ರತಿನಿತ್ಯ ರಾತ್ರಿ ವೇಳೆ ಸ್ಲೀಪರ್ ಕೋಚ್ ಬಸ್ ಸೇವೆ ಸೌಲಭ್ಯ ಇಲ್ಲದಿರುವುದರಿಂದ ವಿಶೇಷವಾಗಿ ವೃದ್ಧರು ಹಾಗೂ ಮಹಿಳೆಯರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಬೆಂಗಳೂರು-ಮಡಿಕೇರಿ ಹಾಗೂ ಮಡಿಕೇರಿ-ಬೆಂಗಳೂರು ಮಾರ್ಗಗಳಲ್ಲಿ ಈ ಕೆಳಕಂಡಂತೆ ಸ್ಲೀಪರ್ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.
ಆ	ಬಂದಿದ್ದಲ್ಲಿ, ಪ್ರತಿನಿತ್ಯ ರಾತ್ರಿ ವೇಳೆ ಬೆಂಗಳೂರಿನಿಂದ (ಮೆಜೆಸ್ಟಿಕ್ ನಿಲ್ದಾಣದಿಂದ) ಮಡಿಕೇರಿಗೆ ಹಾಗೂ ಮಡಿಕೇರಿಯಿಂದ ಬೆಂಗಳೂರಿಗೆ (ಮೆಜೆಸ್ಟಿಕ್ ನಿಲ್ದಾಣಕ್ಕೆ) ತಲುಪುವಂತೆ ಸ್ಲೀಪರ್ ಕೋಚ್ ಬಸ್ ಸೇವೆಯನ್ನು ಕಲ್ಪಿಸಲಾಗುವುದೇ:	
ಇ	ಯಾವ ಕಾಲಮಿತಿಯೊಳಗೆ ಸದರಿ ಬಸ್ ಸೇವೆಯನ್ನು ಕಲ್ಪಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು?	

ಕ್ರಮ ಸಂ	ಮಾರ್ಗ	ಸಾರಿಗೆ ವರ್ಗ	ಬೆಂಗಳೂರು ನಿರ್ಗಮನ ಸಮಯ	ಮಡಿಕೇರಿ ತಲುಪುವ ಸಮಯ
1	ಬೆಂಗಳೂರು-ಪುತ್ತೂರು (ವಯಾ: ಮಡಿಕೇರಿ)	ನಾನ್ ಎಸಿ ಸ್ಲೀಪರ್	21:50	04:00
2	ಬೆಂಗಳೂರು-ಕಾಸರಗೂಡು (ವಯಾ: ಮಡಿಕೇರಿ)	ನಾನ್ ಎಸಿ ಸ್ಲೀಪರ್	20:00	02:30
3	ಬೆಂಗಳೂರು-ಕಾಸರಗೂಡು (ವಯಾ: ಮಡಿಕೇರಿ)	ಎಸಿ ಸ್ಲೀಪರ್	21:15	02:45

ಕ್ರಮ ಸಂ	ಮಾರ್ಗ	ಸಾರಿಗೆ ವರ್ಗ	ಮಡಿಕೇರಿ ನಿರ್ಗಮನ ಸಮಯ	ಬೆಂಗಳೂರು ತಲುಪುವ ಸಮಯ
1	ಪುತ್ತೂರು-ಬೆಂಗಳೂರು (ವಯಾ: ಮಡಿಕೇರಿ)	ನಾನ್ ಎಸಿ ಸ್ಲೀಪರ್	23:45	05:15
2	ಕಾಸರಗೂಡು - ಬೆಂಗಳೂರು (ವಯಾ: ಮಡಿಕೇರಿ)	ನಾನ್ ಎಸಿ ಸ್ಲೀಪರ್	00:30	05:50
3	ಕಾಸರಗೂಡು - ಬೆಂಗಳೂರು (ವಯಾ: ಮಡಿಕೇರಿ)	ಎಸಿ ಸ್ಲೀಪರ್	00:45	06:00

ಮೇಲೆ ತಿಳಿಸಿರುವ ಸಾರಿಗೆಗಳು ಬೆಂಗಳೂರು ನಗರ ವ್ಯಾಪ್ತಿಯ ಮೈಸೂರು ರಸ್ತೆ ಬಸ್ ನಿಲ್ದಾಣದಿಂದ **(ಸ್ಯಾಟಲೈಟ್ ಬಸ್ ನಿಲ್ದಾಣ)** ಕಾರ್ಯಾಚರಿಸಲಾಗುತ್ತಿದೆ.

		ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಕೆಂಪೇಗೌಡ ಬಸ್ ನಿಲ್ದಾಣ (ಮೆಜೆಸ್ಟಿಕ್ ನಿಲ್ದಾಣ) – ಮೈಸೂರು ರಸ್ತೆ ಬಸ್ ನಿಲ್ದಾಣ ಮಾರ್ಗದಲ್ಲಿ ನಿಗಮದ ವತಿಯಿಂದ ಸಂಪರ್ಕ ಸಾರಿಗೆಗಳನ್ನು ಕಾರ್ಯಾಚರಿಸುತ್ತಿದ್ದು, ಸದರಿ ಸಾರಿಗೆಗಳ ಉಪಯೋಗವನ್ನು ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಹಾಗೂ ಕೆಂಪೇಗೌಡ ಬಸ್ ನಿಲ್ದಾಣದಿಂದ ಮೈಸೂರು ರಸ್ತೆ ಬಸ್ ನಿಲ್ದಾಣಕ್ಕೆ ಪ್ರಯಾಣಿಸುವ ಪ್ರಯಾಣಿಕರು ಪಡೆಯಬಹುದಾಗಿರುತ್ತದೆ.

ಸಂಖ್ಯೆ: ಟಿಡಿ 33 ಟಿಸಿಕ್ಯೂ 2019

(ಡಿ.ಸಿ.ತಮ್ಮಣ್ಣ)
ಸಾರಿಗೆ ಸಚಿವರು